# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ ನಂ.270-2015** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ರಾಮಲಿಂಗು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 16-10-2021. |

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ ವಕೀಲರಿಂದಃ**

ಜುಬೇರ್ ಎನ್ನುವ ವ್ಯಕ್ತಿ ನನಗೆ ಗೊತ್ತಿಲ್ಲ. ನನ್ನ ತಮ್ಮ ನಾರಾಯಣ ಜುಬೇರ್ ಎನ್ನುವ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಆರೋಪಿಯನ್ನು ಪರಿಚಯ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ 2001 ರಲ್ಲಿ ನನ್ನ ತಮ್ಮ ನಾರಾಯಣನ ಬಳಿ ರೂ.10,000/- ಸಾಲ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ. 2005-06 ರಲ್ಲಿ ಆರೋಪಿ ಅವರ ಬ್ಯಾಂಕ್ ಖಾತೆಯನ್ನು ಕ್ಲೋಸ್ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ನಾರಾಯಣ ಫೈನಾನ್ಸ್ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಮ್ಮ ಯೋಗಾನಂದ ಎಂಬುವವರು ವಿರುದ್ಧ ಸಿಸಿ.992-2013, 1833/2014 ರಂತೆ ಎರಡು ಚೆಕ್ ಬೌನ್ಸ್ ಪ್ರಕರಣ ದಾಖಲಸಿದ್ದಾರೆ ಎಂದರೆ ಸಾಕ್ಷಿಯು ಅದು ಆತನ ವ್ಯವಹಾರ ಅದಕ್ಕೂ ನನಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ನನಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಯಾವುದೇ ಸಾಲ ಪಡೆದಿಲ್ಲ, ನನಗೆ ನಿಪಿ-1 ನ್ನು ನೀಡಿಲ್ಲ ಎಂದರೆ ಸರಿಯಲ್ಲ. 2012-13 ರಲ್ಲಿ ಆರೋಪಿ ಲಕ್ಷಾಂತರ ರೂಗಳ ವ್ಯಾಪಾರ ವಹಿವಾಟು ನಡೆಸುತ್ತಿದ್ದರು, ಅವರಿಗೆ ನನ್ನಿಂದ ಸಾಲ ಪಡೆಯುವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ತಮ್ಮನಾದ ನಾರಾಯಣ ಬಳಿ ವ್ಯವಹಾರ ಮಾಡಿರುವುದು, ನನ್ನ ಬಳಿ ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲ, ನಾನು ಹಾಗೂ ನನ್ನ ವಕೀಲರು ಸಂಬಂಧಿಕರಾದ್ದರಿಂದ ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

## (ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**